ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ 24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ:04-09-2021 ರಂದು ಆಯೋಜಿಸಿದ್ದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

1. ಶ್ರೀಮತಿ ರೇಣುಕಾ ಸ್ವಾಮಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
2. ಶ್ರೀ ಲಕ್ಷ್ಮಣಪ್ಪ, ಸಿ.ವಿ. ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 24 ಹೆಚ್.ಬಿ.ಆರ್ ಬಡಾವಣೆ.
3. ಶ್ರೀ ಮೊಹಮ್ಮದ್ ಇಬ್ರಾಹಿಮ್, (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಇಲಾಖೆ
4. ಶ್ರೀ ಶ್ರೀಕಾಂತ್ ಅಸೆಸರ್, ಕಂದಾಯ ಇಲಾಖೆ.
5. ಶ್ರೀ. ಪ್ರಸನ್ನ ಎ.ಆರ್, ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ
6. ಶ್ರೀ.ಎಸ್.ಜೆ.ತೋಳ್ಪಾಡಿ, ಅಧ್ಯಕ್ಷರು ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ
7. ಶ್ರೀ ವಿಕ್ರಂ.ಎಂ.ವಿ. ಸ್ಥಳೀಯರು,
8. ಶ್ರೀ.ಜೆ ಅಲೆಕ್ಸಾಂಡರ್ ವಿಜಯ್ ಕುಮಾರ್, ಸ್ಥಳೀಯರು
9. ಶ್ರೀ ಪಿಟಾಂಡಿ, ಸ್ಥಳೀಯರು,

ಇಂದಿನ ಸಭೆಯಲ್ಲಿ ಈ ಹಿಂದೆ ನಡೆಸಿದ್ದ ವಾರ್ಡ್ ಸಮಿತಿಯ ನಡಾವಳಿಗಳನ್ನು ಚರ್ಚಿಸಿ ಬಹುತೇಕ ಸಾರ್ವಜನಿಕ ಕುಂದು ಕೊರತೆಗಳನ್ನು ಮುಖ್ಯವಾಗಿ ಕುಡಿಯುವ ನೀರು, ವಿದ್ಯುತ್ ದೀಪಗಳನ್ನು ದುರಸ್ಥಿಗೊಳಿಸಲು, ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟ ದೂರುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸಿ ಬಗೆಹರಿಸುವ ಬಗ್ಗೆ ಸಮಿತಿಯ ಕಾರ್ಯದರ್ಶಿಯವರು ಸಭೆಗೆ ವಿವರಿಸಿದರು.

ದಿನಾಂಕ: 04.09.2021 ರಂದು ನಡೆದ ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರನ್ನು ಹಾಗೂ ವಿವಿಧ ಇಲಾಖೆಗಳನ್ನು ಪ್ರತಿನಿಧಿಸಿ ಹಾಜರಾಗಿದ್ದ ಅಧಿಕಾರಿ ವರ್ಗದವರನ್ನು ಕಾರ್ಯದರ್ಶಿಯವರು ಸ್ವಾಗತಿಸಿದರು.

ಇಂದಿನ ಸಭೆಯಲ್ಲಿ ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ.ತೋಳ್ಪಾಡಿ ರವರು ಮಾತನಾಡಿ, 4ನೇ ಬ್ಲಾಕ್‌ನಿಂದ 5ನೇ ಬ್ಲಾಕ್ (ಕರ್ನಾಟಕ ಬ್ಯಾಂಕ್) ಮುಖ್ಯ ರಸ್ತೆಯಲ್ಲಿ ಅಗೆದು ಸಾರ್ವಜನಿಕರಿಗೆ ಅನಾನುಕೂಲ ಮಾಡಿರುವುದನ್ನು ಕೂಡಲೇ ಸರಿಪಡಿಸಬೇಕೆಂದು ಸಭೆಗೆ ತಿಳಿಸಿದರು.

1ನೇ ಮುಖ್ಯರಸ್ತೆ, ನರೇಂದ್ರ ಟೆಂಟ್ ರಸ್ತೆ (80' ಅಡಿ) ರಸ್ತೆಯ ಎಡ ಬದಿಯಲ್ಲಿರುವ ಚರಂಡಿಯಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸಿ ಬೃಹತ್ ನೀರುಗಾಲುವೆಗೆ ಹರಿದು ಹೋಗುವಂತೆ ಕ್ರಮ ಕೈಗೊಂಡು ಚರಂಡಿಯ ಪಕ್ಕದಲ್ಲಿ ವಾಸವಾಗಿರುವ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಶ್ರೀ.ಪ್ರಸನ್ನಕುಮಾರ್ (ಪ್ರಧಾನ ಕಾರ್ಯದರ್ಶಿ) ರವರು ಸಭೆಯಲ್ಲಿ ತಿಳಿಸಿದರು.

ವಾರ್ಡ್ ಪರಿಮಿತಿಯಲ್ಲಿನ ಹಲವು ಪ್ರಮುಖ ರಸ್ತೆಗಳಲ್ಲಿ ಬೀದಿ ದೀಪಗಳು ದುರಸ್ಥಿಗೊಳಗಾಗಿ ರಾತ್ರಿ ವೇಳೆಯಲ್ಲಿ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಸಹ ಸಮಸ್ಯೆಯನ್ನು ಬಗೆ ಹರಿಸುತ್ತಿಲ್ಲ ಹಾಗೂ ವಾರ್ಡ್ ಸಮಿತಿ ಸಭೆಗೆ ಹಾಜರಾಗುತ್ತಿಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ವಾರ್ಡ್ ಸಮಿತಿ ಕಾರ್ಯದರ್ಶಿಯವರು ಬೆಸ್ಕಾಂ ಇಲಾಖೆಯ ಸಹಾಯಕ ಅಭಿಯಂತರಾದ ಶ್ರೀ.ವಿನಯ್ (9480683094) ರವರಿಗೆ ಕರೆ ಮಾಡಿ ತಿಳಿಸಿದಾಗ ಬೀದಿ ದೀಪಗಳನ್ನು ಮುಂದಿನ ವಾರ್ಡ್ ಸಮಿತಿ ಆಯೋಜಿಸುವ ಮೊದಲೇ ಸರಿಪಡಿಸುತ್ತೇವೆಂದು ತಿಳಿಸಿದರು.

ವಾರ್ಡ್ ಪರಿಮಿತಿಯಲ್ಲಿ ಅಳವಡಿಸಿರುವ ಕೆಲವು ಸಿ.ಸಿ ಕ್ಯಾಮರಗಳನ್ನು ಕಾರ್ಯನಿರ್ವಹಿಸುತ್ತಿಲ್ಲವೆಂದು ಹಾಗೂ ಅನೇಕ ಬಾರಿ ಸಭೆಯಲ್ಲಿ ತಿಳಿಸಿದರೂ ಸಹ ಕ್ರಮ ಕೈಗೊಂಡಿಲ್ಲವೆಂದು ಕೆಲವು ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ. ತಕ್ಷಣ ಕಾರ್ಯದರ್ಶಿಯವರು ಶ್ರೀ.ಹರೀಶ್ (ಸಿ.ಸಿ ಕ್ಯಾಮರಾ ನಿರ್ವಹಣೆಗಾರ-8310133979) ರವರಿಗೆ ಕರೆ ಮಾಡಿ ವಿಷಯವನ್ನು ತಿಳಿಸಿದಾಗ ಕಾರ್ಯನಿರ್ವಹಿಸದೇ ಇರುವ ಸಿಸಿ ಕ್ಯಾಮರಗಳನ್ನು ದಿನಾಂಕ:07.09.2021 ರ ಒಳಗೆ ಸರಿಪಡಿಸುತ್ತೇವೆಂದು ತಿಳಿಸಿರುತ್ತಾರೆ.

ಶ್ರೀ.ಪ್ರಸನ್ನ ಕುಮಾರ್ ಪ್ರಧಾನ ಕಾರ್ಯದರ್ಶಿ ರವರು ಮಾತನಾಡಿ ಬಯೋ ಟೆಕ್‌ಪಾರ್ಕ್ (ಫಾರೆಸ್ಟ್ ರಸ್ತೆ) ಯಲ್ಲಿ ಬೆಸ್ಕಾಂ ರವರು ಅಗೆದಿರುವ ರಸ್ತೆ ಗುಂಡಿಗಳನ್ನು ಹಾಗೂ ಕೆಲವು ಅನಾಮಧೇಯರು ರಾತ್ರಿ ವೇಳೆಯಲ್ಲಿ ಬೃಹತ್ ಪ್ರಮಾಣದ ಡೆಬ್ರೀಸನ್ನು ರಸ್ತೆ ಮೇಲೆ ಹಾಕಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದರಿಂದ ಕೂಡಲೇ ಇಂತಹ ಅನಾಮಧೇಯರನ್ನು ಪತ್ತೇ ಮಾಡಿ ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಭೆಗೆ ತಿಳಿಸಿದರು.

ರಾತ್ರಿ ವೇಳೆ ಬಯೋ ವೆಟ್‌ಮಾರ್ಕ್ (ಫಾರೆಸ್ಟ್) ರಸ್ತೆಯಲ್ಲಿ ಕಟ್ಟಡದ ಅವಶೇಷಗಳನ್ನು ರಾತ್ರಿ ವೇಳೆಯಲ್ಲಿ ಸುರಿಯುವವರನ್ನು ಪತ್ತೆ ಮಾಡಲು ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾರ್ಷಲ್ (ಶ್ರೀ.ರಾಜೇಶ್- 9620983028) ರವರನ್ನು ಸದರಿ ಸ್ಥಳಗಳಲ್ಲಿ ಕಾರ್ಯನಿರ್ವಹಿಸಿ ಅವರ ವಿವರಗಳನ್ನು ಪಡೆದು ತಿಳಿಸಿದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಸಮಿತಿಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

ಶ್ರೀ.ವಿಜಯಕುಮಾರ್ ಅಲೆಕ್ಸಾಂಡರ್ ಕ್ಷೇಮಾಭಿವೃದ್ಧಿ ಸದಸ್ಯರು ರವರು ಮಾತನಾಡಿ ವಾರ್ಡ್‌ನ ಅನೇಕ ಸ್ಥಳಗಳಲ್ಲಿ ಕೋಳಿ ಪುಕ್ಕಗಳನ್ನು ಸುರಿದು, ಪರಿಸರ ಕಲುಷಿತಗೊಳಿಸುವವರನ್ನು ಪತ್ತೆಮಾಡಿ ಕ್ರಮ ಕೈಗೊಳ್ಳುವಂತೆ ಹಾಗೂ ಆರೋಗ್ಯ ಇಲಾಖೆಯಿಂದ ಸರಿಯಾದ ರೀತಿಯಲ್ಲಿ ಫಾಗಿಂಗ್ ಅನ್ನು ನಿರ್ವಹಿಸಬೇಕೆಂದು ಸಭೆಗೆ ತಿಳಿಸಿದರು.

ಕಾರ್ಯದರ್ಶಿಯವರು ಇದಕ್ಕೆ ಉತ್ತರ ನೀಡುತ್ತಾ ಪಶುಸಂಗೋಪನಾ ಇಲಾಖೆಯ ಜಂಟಿ ನಿರ್ದೇಶಕರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ಈ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ವಾರ್ಡ್ ಸಮಿತಿಯ ಸಮ್ಮುಖದಲ್ಲಿ ಸಭೆಗೆ ತಿಳಿಸಿದರು.

ಶ್ರೀ.ಗಂಗಾಧರ್ ರವರು ಮಾತನಾಡುತ್ತಾ ಹೆಣ್ಣೂರು ಮಾತಾಂಗ ಬಡಾವಣೆಯ ಅಪಾರ್ಟ್‌ಮೆಂಟ್‌ನ ರಸ್ತೆಯಲ್ಲಿ ಗಂಭೀರ ಪ್ರಮಾಣದ ರಸ್ತೆ ಗುಂಡಿಗಳನ್ನು, ಇವುಗಳನ್ನು ತುರ್ತಾಗಿ ಸರಿಪಡಿಸಬೇಕೆಂದು ಹಾಗೂ ಒಂಟಿ ಮನೆಗಳ ಬಿಲ್ ಪಾವತಿ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಬೇಕೆಂದು ಸಭೆಗೆ ತಿಳಿಸಿದರು. ಹೆಣ್ಣೂರು ಮುಖ್ಯರಸ್ತೆ ಅಥವಾ ಸುತ್ತಮುತ್ತಲಿನ ಪ್ರದೇಶಗಳಿಂದ ಸಭೆಗೆ ಹಾಜರಾಗಿದ್ದ ಕೆಲವು ಸಾರ್ವಜನಿಕರು ಈ ಪ್ರದೇಶದಲ್ಲಿ ಸಾರ್ವಜನಿಕರಿಗೆ ಶೌಚಾಲಯವಿಲ್ಲದೆ ತೊಂದರೆಯಾಗಿದ್ದು, ಒಂದು ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಿಕೊಡಲು ಕ್ರಮ ಕೈಗೊಳ್ಳಲು ಸಭೆಗೆ ತಿಳಿಸಿದರು.

ಈ ಪ್ರದೇಶದಲ್ಲಿ ಶೌಚಾಲಯದ ಅವಶ್ಯಕತೆ ಇರುವುದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

ವಾರ್ಡ್ ಸಂಖ್ಯೆ.24 ಹೆಚ್.ಬಿ.ಆರ್ ಬಡಾವಣೆಯ ಕಂಪೇಗೌಡ ರಸ್ತೆ, ಬೈರವೇಶ್ವರ ಬಡಾವಣೆ ಹಾಗೂ ಪ್ರಕೃತಿ ಬಡಾವಣೆ, ಘನತ್ಯಾಜ್ಯ ಹೆಚ್ಚು ಪ್ರಮಾಣದಲ್ಲಿ ಶೇಖರಣೆಯಾಗುತ್ತಿರುವುದರಿಂದ ಹಾಲಿ ಇರುವ 28 ಬ್ಲಾಕ್‌ಗಳ ಜೊತೆಗೆ 8 ಬ್ಲಾಕ್‌ಗಳನ್ನು ಹೆಚ್ಚುವರಿಯಾಗಿ ಸೇರಿಸಿ ಒಟ್ಟು 36 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ ಎಂಬ ವಿಷಯವನ್ನು ಘನತ್ಯಾಜ್ಯ ನಿರ್ವಹಣೆ ವಿಭಾಗ ರವರು ಸಭೆಗೆ ತಿಳಿಸಿದರು.

<u>ಸದರಿ ಸಮಸ್ಯೆಯನ್ನು ನೋಡಲ್ ಅಧಿಕಾರಿಯವರ ಆದೇಶದಂತೆ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.</u>

ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪವಾಗಿದ್ದ ಬಹುತೇಕ ಸಾರ್ವಜನಿಕ ಸಮಸ್ಯೆಗಳನ್ನು ಪರಿಹರಿಸಲು ತುರ್ತಾಗಿಕ್ರಮ ವಹಿಸಲಾಗುವುದೆಂದು ಹಾಗೂ ಇಂದಿನ ಸಭೆಯಲ್ಲಿ ಮಂಡಿಸಲಾದ ಕುಂದು ಕೊರತೆಗಳನ್ನು ಶೀಘ್ರದಲ್ಲಿ ಪರಿಹರಿಸಲಾಗುವುದೆಂದು ಸಭೆಗೆ ತಿಳಿಸಿದ ಅಧಿಕಾರಿ ವರ್ಗದವರಿಗೆ ಸಮಿತಿಯ ಕಾರ್ಯದರ್ಶಿಯವರು ವಂದನೆಗಳನ್ನು ಸಲ್ಲಿಸಿ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

4/9/24
ಸಿ.ವಿ.ಲಕ್ಷ್ಮಣ
ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 24 ಹೆಚ್.ಬಿ.ಆರ್ ಬಡಾವಣೆ

ಶ್ರೀಮತಿ.ರೇಣುಕಾ ಸ್ವಾಮಿ
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ.24

<u>ಪ್ರತಿಯನ್ನು</u>

1. ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ಪೂರ್ವ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಫ್ರೇಜರ್‌ಟೌನ್ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಪೊಲೀಸ್ ಇನ್ಸ್‌ಪೆಕ್ಟರ್, (ಸಂಚಾರ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಪೊಲೀಸ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಕಲ್ಯಾಣ ಇಲಾಖೆ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಪಶು ಸಂಗೋಪನಾ ಇಲಾಖೆ, (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಕಛೇರಿ ಕಡತಕ್ಕೆ.